Online Newspaper Clipping Service
**Dated, Thursday 22nd December – 2016**

DECCAN HERALD

**Pg.No.02**

# Private hospitals told to register with medical waste disposal agency

**KOLAR:** Deputy Commissioner Dr K V Trilok Chandra has directed the officials of Family and Welfare department to cancel the licence of hospitals which do not dispose of medical waste in the stipulated manner.

Speaking at a meeting of the biomedical waste management committee, the deputy commissioner said that the task of disposing of various types of waste generated at hospitals had been entrusted to a private agency. The workers of the said agency should collect the waste from hospitals every evening. A medical waste disposal unit has been set up near Aleri village in the taluk. Meera Environment Tech Agency has been entrusted with the task of scientific disposal of medical waste.

He said that more than 282 hospitals and clinics were functioning in the district and they should register themselves with Meera Environment Tech Agency by paying a fee of Rs 3,000. A notice on compulsory enrolment should be issued al private hospitals.

The DC said that improper disposal of medical waste would have a deleterious effect on environment as well as human life and hence the officials of the health department should visit hospitals every week to ensure proper disposal of medical waste.

Brahmareddy, the representative from Meera Environment Tech Agency, said that they have been collecting medical waste from the hospitals which had registered with them. However, some private hospitals had been handing over the waste generated by them to the garbage lifting vehicles of the municipality.

Responding to the complaint, the deputy commissioner said that notice should be issued to the hospitals which have not registered with the agency and in case they fail to register themselves within a week, the licence of such shop should be cancelled.

District surgeon Dr Shivakumar said that food was being provided to as many as 300 patients at SNR district hospital and the garbage generated there was being dumped on the hospital premises. He said setting up of a compost unit would be of great help. The deputy commissioner asked the officials concerned for construction of a compost unit for scientific disposal of garbage generated at the hospital.

**DH News Service**

ಸಂಯುಕ್ತ ಕರ್ನಾಟಕ



# ಫೋರೇನ್ಸಿಕ್‌ನಲ್ಲಿ ಸಂಶೋಧನೆ ಅನಿವಾರ್ಯ

**ಕೋಲಾರ:** ಅಪರಾಧ ಪ್ರಕರಣಗಳ ಪತ್ತೆ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸುವ ವಿಧಿ ವಿಜ್ಞಾನ ಮತ್ತು ವಿಷಶಾಸ್ತ್ರ ವಿಭಾಗದಲ್ಲಿ ಆಧುನಿಕ ಸಂಶೋಧನೆಗಳು ಆಗುತ್ತಿಲ್ಲ ಎಂದು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಡಾ.ಆರ್.ಪಿ.ಶರ್ಮ ವಿಷಾದಿಸಿದರು.

ರಾಜ್ಯ ವೈದ್ಯ ಕಾನೂನು ಸಂಸ್ಥೆ ಆಶ್ರಯದಲ್ಲಿ ಟಮಕದ ದೇವರಾಜ ಅರಸು ವೈದ್ಯಕೀಯ ವಿವಿಯಲ್ಲಿ ಬುಧವಾರ 24ನೇ ರಾಜ್ಯ ಮಟ್ಟದ ಕಾನೂನು ವೈದ್ಯಶಾಸ್ತ್ರ ತಜ್ಞರ ಸಮ್ಮೇಳನದಲ್ಲಿ ಮಾತನಾಡಿದರು.

ಶೀರಾ ಹಳೆಯದಾದ ಸಾಂಪ್ರದಾಯಿಕ ವಿಧಾನಗಳ ಅನುಸರಣೆಯಿಂದ ಅಪರಾಧಗಳ ಪತ್ತೆ ಹಾಗೂ ವೈದ್ಯಕೀಯ ಕಾನೂನು ಶಾಸ್ತ್ರದಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲು ಸಾಧ್ಯವಾಗಿಲ್ಲ, ಯುಗದಲ್ಲಿ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಕ್ಷೇತ್ರಗಳ ರೀತಿಯಲ್ಲೇ ಇಲ್ಲಿಯೂ ಉನ್ನತ ಸಂಶೋಧನೆಗೆ ಒತ್ತು ನೀಡಬೇಕು ಎಂದು ಸಲಹೆ ಮಾಡಿದರು.

ಈಚಿನ ದಿನಗಳಲ್ಲಿ ಅನುಮಾನಾಸ್ಪದ ಸಾವುಗಳ ಸಂಖ್ಯೆ ಹೆಚ್ಚಾಗುತ್ತಿದೆ, ಅದರಲ್ಲಿನ ಕಾನೂನು ಪ್ರಕ್ರಿಯೆ ನಿಭಾಯಿಸಲು ವೈದ್ಯರು ಮತ್ತು ತನಿಖಾಧಿಕಾರಿಗಳಿಗೆ ಸವಾಲು ಎದುರಾಗಿದೆ, ದೇಹದಲ್ಲಿನ ಮುಖ್ಯಭಾಗ ಹಾಗೂ ರಕ್ತವನ್ನು ವಿಧಿ ವಿಜ್ಞಾನ ಸಂಸ್ಥೆಗೆ ಕಳುಹಿಸುವ ಮೂಲಕ ಕೈ ತೊಳೆದುಕೊಳ್ಳುವ ಸ್ಥಿತಿ ಇದೆ, ಅಗತ್ಯ ಸಿಬ್ಬಂದಿ ಕೊರತೆಯಿಂದ ಫೋರೇನ್ಸಿಕ್ ವರದಿ ತಯಾರಿಗೆ ದೀರ್ಘ ಕಾಲಾವಧಿ ಹಿಡಿಯುತ್ತಿದೆ ಎಂದು ವಿವರಿಸಿದರು.



ಅಂತಿಮ ವರದಿ ಬರುವಷ್ಟರಲ್ಲಿ ಬಹುತೇಕ ಪ್ರಕರಣಗಳಲ್ಲಿ ಸಾಕ್ಷಿ ನಾಶ ಆಗಿರುತ್ತದೆ, ಇದು ಆರೋಪಿಗಳಿಗೆ ನ್ಯಾಯಾಲಯದಲ್ಲಿ ಶಿಕ್ಷೆ ಆಗದೆ ಅನುಕೂಲ ಆಗುತ್ತಿದೆ, ಈ ಹಿನ್ನಲೆಯಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ವಿಧಿ ವಿಜ್ಞಾನ ವಿಭಾಗದಲ್ಲಿ ಹೆಚ್ಚಿನ ಸಂಶೋಧನೆ ನಡೆದು ಘಟನೆ ನಡೆದ ಸ್ಥಳದಲ್ಲೇ ವರದಿ ನೀಡುವ ಪರಿಸ್ಥಿತಿ ನಿರ್ಮಾಣವಾದರೆ ಅಪರಾಧಗಳ ಪ್ರಕರಣಗಳ ನಿಯಂತ್ರಣಕ್ಕೆ ಅನುಕೂಲ ಆಗುತ್ತದೆ ಎಂದು ಹೇಳಿದರು.

ಸಮ್ಮೇಳನ ಉದ್ಘಾಟಿಸಿದ ಹೈಕೋರ್ಟ್ ನ್ಯಾಯಮೂರ್ತಿ ಜಿ.ನರೇಂದರ್ ಮಾತನಾಡಿ ಪೊಲೀಸ್,ನ್ಯಾಯಾಂಗ,ಕಾನೂನು ಇಲಾಖೆಯ ಆಧಾರ ಸ್ತಂಭವಾಗಿರುವ ನ್ಯಾಯ ವೈದ್ಯ ಶಾಸ್ತ್ರವನ್ನು ಬಲಪಡಿಸಿದರೆ ಶಿಕ್ಷೆಯ ಪ್ರಮಾಣ ಹೆಚ್ಚಾಗುವ ಮೂಲಕ ಸಮಾಜದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಮರ್ಪಕವಾಗಿ ಜಾರಿಗೆ ತರಲು ಸಾಧ್ಯವಾಗುತ್ತದೆ ಎಂದರು.

ಜಿಲ್ಲಾ ರಕ್ಷಣಾಧಿಕಾರಿ ಡಾ.ದಿವ್ಯಾ ಗೋಪಿನಾಥ್, ಅರಸು ವೈದ್ಯಕೀಯ ವಿವಿ ಉಪ ಕುಲಪತಿ ಡಾ.ಸಿ.ವಿ.ರಘುವೀರ್, ರಿಜಿಸ್ಟ್ರಾರ್ ಡಾ.ಎ.ವಿ.ಎಂ.ಕುಟ್ಟಿ, ಪ್ರಿನ್ಸಿಪಾಲ್ ಡಾ.ಎಂ.ಎಲ್.ಹರೇಂದ್ರಕುಮಾರ್, ಡಾ.ಶ್ರೀನಿವಾಸರೆಡ್ಡಿ, ಡಾ.ಕಿರಣ್ ಹಾಜರಿದ್ದರು.

# ‘ಕಾನೂನು ಪ್ರಕರಣ ಇತ್ಯರ್ಥಕ್ಕೆ ಫೋರೆನ್ಸಿಕ್ ಸಹಕಾರಿ’

**ಕೋಲಾರ:** ಫೋರೆನ್ಸಿಕ್ ವಿಜ್ಞಾನವು ಕಾನೂನು ಪ್ರಕರಣಗಳ ನ್ಯಾಯಯುತ ಇತ್ಯರ್ಥಕ್ಕೆ ಹೆಚ್ಚು ಪ್ರಯೋಜನಕಾರಿಯಾಗಿದೆಯೆಂದು ಹೈಕೋರ್ಟ್ ನ್ಯಾಯಮೂರ್ತಿ ಜಿ.ನರೇಂದರ್ ಅಭಿಪ್ರಾಯಪಟ್ಟರು.

ನಗರದ ದೇವರಾಜ ಅರಸು ವೈದ್ಯಕೀಯ ಕಾಲೇಜಿನ ಫೋರೆನ್ಸಿಕ್ ವೈದ್ಯಶಾಸ್ತ್ರ ವಿಭಾಗ ಕರ್ನಾಟಕ ಮೆಡಿಕೋ ಲೀಗಲ್ ಸೊಸೈಟಿ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ 24 ನೇ ವಾರ್ಷಿಕ ಸಮಾವೇಶ ಕಮ್ಲಾಸ್ಕಾನ್ -2016 ಉದ್ಘಾಟಿಸಿ ಮಾತನಾಡಿದರು.

ಸಾಮಾನ್ಯವಾಗಿ ಫೋರೆನ್ಸಿಕ್ ಸೈನ್ಸ್ ಅಪರಾಧ ಪ್ರಕರಣಗಳಿಗೆ ಮಾತ್ರವೇ ಉಪಯೋಗವಾಗುತ್ತದೆ ಎನ್ನುವ ಭಾವನೆ ಇದೆ, ಆದರೆ, ಅನೇಕ ಸಿವಿಲ್ ಪ್ರಕರಣಗಳಲ್ಲಿಯೂ ದಾಖಲೆಗಳ ರುಜುವಾತು ಪಡೆಸಲು ಫೋರೆನ್ಸಿಕ್ ವಿಜ್ಞಾನವನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ವಿವರಿಸಿದರು.

ಫೋರೆನ್ಸಿಕ್ ವಿಜ್ಞಾನದ ಹೊಸ ಆವಿಷ್ಕಾರಗಳ ಕುರಿತಂತೆ 24ನೇ ಸಮ್ಮೇಳನದಲ್ಲಿ ಚರ್ಚೆಯಾಗಿ ಅವುಗಳು ಸದ್ಬಳಕೆ ಪ್ರಕರಣಗಳ ಇತ್ಯರ್ಥಕ್ಕೆ ಉಪಯೋಗವಾಗಲಿ ಎಂದು ಅವರು ಆಶಿಸಿದರು.

ಪೊಲೀಸ್ ಇಲಾಖೆ ಎಡಿಜಿಪಿ ರಜವೀರ್ ಪಿ. ಶರ್ಮ ಮಾತನಾಡಿ, ತಾವು 35 ವರ್ಷಗಳಿಂದಲೂ ಫೋರೆನ್ಸಿಕ್ ವಿಜ್ಞಾನ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದು ಈ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಯ ಜ್ಞಾನವನ್ನು ಕಾಲಕಾಲಕ್ಕೆ ಅರಿತುಕೊಂಡು ಕಾನೂನು ವ್ಯಾಪ್ತಿಗಳ ವಿಲೇವಾರಿಯ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಿದೆಯೆಂದರು.

ಯಾವುದೇ ಅಪರಾಧಿ ತನ್ನಲ್ಲಿರುವ ತಪ್ಪಿತಸ್ಥ ಭಾವನೆಯಿಂದಾಗಿ ಸಾಕಷ್ಟು ಸುಳಿವುಗಳನ್ನು ಅಪರಾಧ ನಡೆಸಿದ ಸ್ಥಳದಲ್ಲಿ ಬಿಟ್ಟಿರುತ್ತಾನೆ, ಇವುಗಳನ್ನು ಕೂಲಂಕಷವಾಗಿ ಫೋರೆನ್ಸಿಕ್ ವಿಜ್ಞಾನ ತಂತ್ರಜ್ಞಾನದ ಮೂಲಕ ಸಂಗ್ರಹಿಸಿದರೆ ಅಪರಾಧಿಗಳನ್ನು ಪತ್ತೆ ಹಚ್ಚುವುದು, ಅಪರಾಧಿಗಳಿಗೆ ಶಿಕ್ಷೆ ವಿಧಿಸುವುದು ಸುಲಭವಾಗುತ್ತದೆಯೆಂದು ಅಭಿಪ್ರಾಯಪಟ್ಟರು.

ದೊಡ್ಡ ಪ್ರಕರಣಗಳಲ್ಲಿ ಫೋರೆನ್ಸಿಕ್ ವಿಜ್ಞಾನವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಲಾಗುತ್ತಿದೆಯಾದರೂ, ಸಾಮಾನ್ಯ ಹಾಗೂ ಸಂಪ್ರದಾಯಿಕ ಕಳ್ಳತನ ಪ್ರಕರಣಗಳ ಪತ್ತೆ ವಿಚಾರದಲ್ಲಿ ಫೋರೆನ್ಸಿಕ್ ವಿಜ್ಞಾನ ಸಮರ್ಥವಾಗಿ ಇನ್ನೂ ಬಳಕೆಯಾಗುತ್ತಿಲ್ಲವೆಂದು ವಿಷಾದಿಸಿದರು.

ಸಾಮಾನ್ಯವಾಗಿ ಅಪರಾಧಿ ಪ್ರಕರಣದ ನ್ಯಾಯಾಂಗ ವ್ಯವಸ್ಥೆಯು ಪೊಲೀಸ್ ಮತ್ತು ಕಾನೂನಿನ ಮೇಲೆ ಮಾತ್ರ ಅವಲಂಬಿತವಾಗಿದೆಯೆಂಬ ಭಾವನೆ ದಟ್ಟವಾಗಿದೆ, ಆದರೆ, ಫೋರೆನ್ಸಿಕ್ ವಿಜ್ಞಾನವೂ ಇದಕ್ಕೆ ಪೂರಕ ಎನ್ನುವುದನ್ನು ಮರೆಯುವಂತಿಲ್ಲ ಎಂದು ಫೋರೆನ್ಸಿಕ್ ವಿಜ್ಞಾನದ ಮಹತ್ವವನ್ನು ಸಾರಿದರು.

ವಿಜ್ಞಾನ ರಂಗದ ರೇಡಿಯೋ ಆಕ್ಟಿವಿಟಿ ಜಗತ್ತಿನ ಆವಿಷ್ಕಾರಗಳನ್ನು ಬಳಕೆ ಮಾಡಿಕೊಂಡು ಅಪರಾಧಿ ಪ್ರಕರಣಗಳನ್ನು ವೇಗವಾಗಿ ನ್ಯಾಯಯುತವಾಗಿ ಇತ್ಯರ್ಥಪಡಿಸಿದರೆ ಅಪರಾಧಿಗಳು ಸ್ವತಂತ್ರವಾಗಿ ಸಮಾಜದಲ್ಲಿ ತಿರುಗಾಡಲು ಅಸಾಧ್ಯ ಎಂದು ಹೇಳಿದರು.

ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಪ್ರತಿಯೊಂದು ವಿಚಾರವೂ ಗೂಗಲ್ ಸರ್ಚ್ ಮೂಲಕ ಲಭ್ಯವಾಗುತ್ತಿರುವ ದಿನಗಳಲ್ಲಿ ವೈದ್ಯರು ಹಳೆಯ ವಿಧಾನಗಳನ್ನೇ ಬಳಸಿ ಫೋರೆನ್ಸಿಕ್ ವರದಿಗಳನ್ನು ನೀಡಿದರೆ ಅವುಗಳಲ್ಲಿರುವ ತಪ್ಪುಗಳು ಜನಸಾಮಾನ್ಯರಿಗೂ ಅರ್ಥವಾಗುತ್ತದೆಯೆಂಬ ಎಚ್ಚರಿಕೆ ಇರಬೇಕೆಂದರು.

ಅಧ್ಯಕ್ಷತೆವಹಿಸಿದ್ದ ಕಾಲೇಜಿನ ಉಪ ಕುಲಪತಿ ಡಾ.ಸಿ.ವಿ.ರಘುವೀರ್ ಮಾತನಾಡಿ, ಫೋರೆನ್ಸಿಕ್ ವಿಜ್ಞಾನವನ್ನು ಯಾವುದೇ ಕಾರಣಕ್ಕೂ ಕಡೆಗಣಿಸುವುದು ಬೇಡ, ವೈದ್ಯರು ಮತ್ತು ಪೊಲೀಸರು ಪರಸ್ಪರ ನಂಬಿಕೆ ವಿಶ್ವಾಸಗಳ ಹೊಂದಾಣಿಕೆಯ ಮೂಲಕ ಎಂತದ್ದೇ ಅಪರಾಧಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ಸಾಧ್ಯವಿದೆ, ಆದರೆ, ಪ್ರಸ್ತುತ ಇಂತ ವಾತಾವರಣ ಕಾಣಿಸುತ್ತಿಲ್ಲ ಎಂದು ವಿಷಾದಿಸಿದರು.

ಪೊಲೀಸ್ ಮತ್ತು ವೈದ್ಯಕೀಯ ರಂಗದ ಹೊಂದಾಣಿಕೆಯಿಂದ ಪ್ರಸ್ತುತ ಅಪರಾಧ ಪತ್ತೆಯಲ್ಲಿ ಆಗುತ್ತಿರುವ ತಪ್ಪು ಗಳನ್ನು ಕಡಿಮೆ ಮಾಡಬಹುದು ಎಂದು ವಿಶ್ವಾಸವ್ಯಕ್ತಪಡಿಸಿದ ಅವರು, ತಮ್ಮ ಕಾಲೇಜಿನ ಸಂಸ್ಥಾಪಕ ಆರ್.ಎಲ್.ಜಾಲಪ್ಪರ ಪ್ರೋತ್ಸಾಹದಿಂದ ಫೋರೆನ್ಸಿಕ್ ವಿಭಾಗವನ್ನು ಅತ್ಯುತ್ತಮವಾಗಿ ಅಭಿವೃದ್ಧಿಪಡಿಸಲಾಗಿದೆಯೆಂದರು.

ಪೊಲೀಸ್ ವರಿಷ್ಠಾಧಿಕಾರಿ ಡಾ.ದಿವ್ಯ ವಿ. ಗೋಪಿನಾಥ್, ಕಾಲೇಜಿನ ರಿಜಿಸ್ಟ್ರಾರ್ ಡಾ. ಎ.ವಿ.ಎಂ.ಕುಟ್ಟಿ ಪ್ರಾಂಶುಪಾಲ ಡಾ.ಹರೇಂದ್ರ ಕುಮಾರ್ ಉಪಸ್ಥಿತರಿದ್ದರು.

ಅಮೃತವರ್ಷಿಣಿ, ಹಿಮ ವರ್ಷಿಣಿ ಪ್ರಾರ್ಥಿಸಿ, ಡಾ.ಶ್ರೀನಿವಾಸರೆಡ್ಡಿ ವಂದಿಸಿದರು.



ದೇವರಾಜ ಅರಸು ವೈದ್ಯಕೀಯ ಕಾಲೇಜಿನಲ್ಲಿ 24 ನೇ ವಾರ್ಷಿಕ ಸಮಾವೇಶ ಕಮ್ಲಾಸ್ಕಾನ್ 2016 ರನ್ನು ಹೈಕೋರ್ಟ್ ನ್ಯಾಯಮೂರ್ತಿ ಜಿ.ನರೇಂದರ್ ಉದ್ಘಾಟಿಸಿದರು.

ವಿಜಯ ಕರ್ನಾಟಕ



# ನ್ಯಾಯತೀರ್ಪಿಗೆ ಸಂಶೋಧನೆ ಪೂರಕ




ಕಾರ್ಯಕ್ರಮದಲ್ಲಿ ವಿಧಿ ವಿಜ್ಞಾನದ ಕುರಿತು ರಚಿಸಿರುವ ಕಿರುಹೊತ್ತಿಗೆಯನ್ನು ಅತಿಥಿಗಳು ಬಿಡುಗಡೆ ಮಾಡಿದರು.

ಅವುಗಳ ಸತ್ಯಾಸತ್ಯತೆ ಪರಿಶೀಲಿಸಲು, ಲಭ್ಯವಾಗುವ ಸಾಕ್ಷಗಳನ್ನು ಬಳಸಿಕೊಂಡು ವಿಧಿ ವಿಜ್ಞಾನ ಪ್ರಯೋಗಾಲಯದ ಮೂಲಕ ಪ್ರಕರಣಕ್ಕೆ ತಾರ್ಕಿಕ ಅಂತ್ಯ ಕಾಣಿಸಲು ಸಾಧ್ಯವಾಗುತ್ತದೆ ಎಂದರು.

ದೇವರಾಜು ಅರಸು ವೈದ್ಯಕೀಯ ಕಾಲೇಜಿನ ಉಪಕುಲಪತಿ ಪ್ರೊ.ಸಿ.ವಿ.ರಘುವೀರ್ ಮಾತನಾಡಿ, ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗುವವರ ಪತ್ತೆ ಹಚ್ಚಲು ವಿಧಿ ವಿಜ್ಞಾನವು ಪ್ರಮುಖ ಪಾತ್ರ ವಹಿಸುತ್ತದೆ ಎಂದು ತಿಳಿಸಿದರು.

ವಿಧಿ ವಿಜ್ಞಾನ ವಿಭಾಗವು ಇಂದು ತೀರ ಅತ್ಯಗತ್ಯ. ನ್ಯಾಯಾಂಗ, ಪೊಲೀಸ್, ವೈದ್ಯಕೀಯ ಮೂರು ರಂಗಗಳಿಗೆ ಅವಶ್ಯಕತೆಯಾಗಿ ಪರಿಣಮಿಸಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದಿವ್ಯಾ.ವಿ. ಗೋಪಿನಾಥ್, ಕಾಲೇಜಿನ ಕುಲಸಚಿವ ಎ.ಎ.ಎಂ ಕುಟ್ಟಿ, ಪ್ರಿನ್ಸಿಪಾಲ್ ಎಂ.ಎಲ್.ಹರೇಂದ್ರ ಕುಮಾರ್, ಕಾಲೇಜಿನ ವಿಧಿ ವಿಜ್ಞಾನ ವಿಭಾಗದ ಮುಖ್ಯಸ್ಥ ಕಿರಣ್, ಶ್ರೀನಿವಾಸರೆಡ್ಡಿ ಹಾಗೂ ವೈದ್ಯಕೀಯ ಪದವಿಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವಿಜಯವಾಣಿ



# ನ್ಯಾಯ ವೈದ್ಯಶಾಸ್ತ್ರ ನ್ಯಾಯಾಂಗ ವ್ಯವಸ್ಥೆಯ ಭಾಗ

## 24ನೇ ರಾಜ್ಯ ಸಮ್ಮೇಳನದಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ನರೇಂದರ್ ಅಭಿಮತ

■ ವಿಜಯವಾಣಿ ಸುದ್ದಿಜಾಲ ಕೋಲಾರ

ನ್ಯಾಯ ವೈದ್ಯಶಾಸ್ತ್ರ ಎಂಬುದು ಕೇವಲ ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದ್ದಲ್ಲ. ಇಂದು ನ್ಯಾಯಾಂಗ ವ್ಯವಸ್ಥೆಯ ಒಂದು ಭಾಗವಾಗಿದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಜಿ.ನರೇಂದರ್ ಅಭಿಪ್ರಾಯಪಟ್ಟರು.

ಟಮಕದಲ್ಲಿನ ಶ್ರೀ ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ ಸಭಾಂಗಣದಲ್ಲಿ ಮೆಡಿಕೋ ಲೀಗಲ್ ಸೊಸೈಟಿ ನ್ಯಾಯ ವೈದ್ಯ ಶಾಸ್ತ್ರ ವಿಭಾಗದ ಆಶ್ರಯದಲ್ಲಿ ಆಯೋಜಿಸಿದ್ದ 24ನೇ ರಾಜ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ನ್ಯಾಯ ವೈದ್ಯಶಾಸ್ತ್ರ ಅಪರಾಧ ಪ್ರಕರಣ, ಸಿವಿಲ್ ವ್ಯಾಜ್ಯ, ಸಹಿ ಇನ್ನಿತರೆ ದಾಖಲೆಗಳ ನೈಜತೆ ಪತ್ತೆಹಚ್ಚಲು ಸಹಕಾರಿಯಾಗಿದೆ ಎಂದರು.

ಲಾಜಿಸ್ಟಿಕ್ ಕಮ್ಯುನಿಕೇಷನ್ ಆ್ಯಂಡ್ ಮಾಡ್ರನೈಜೇಷನ್ ಎಡಿಜಿಪಿ ಡಾ.ರಾಜ್‌ವೀರ್ ಪಿ.ಶರ್ಮಾ ಮಾತನಾಡಿ, 35 ವರ್ಷಗಳಿಂದ ನಾನು ನ್ಯಾಯ ವೈದ್ಯಶಾಸ್ತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅಂದಿಗೂ ಇಂದಿಗೂ ಸಾಕಷ್ಟು ಸುಧಾರಣೆಯಾದರೂ ಇತ್ತೀಚೆಗೆ ಹೊಸ ಹೊಸ ಸವಾಲುಗಳು ಎದುರಾಗುತ್ತಲೇ ಇವೆ. ಇದನ್ನು ಸಮರ್ಥವಾಗಿ ಎದುರಿಸುವ ನಿಟ್ಟಿನಲ್ಲಿ ನ್ಯಾಯ ವೈದ್ಯಶಾಸ್ತ್ರದಲ್ಲಿ ಇನ್ನಷ್ಟು ಉನ್ನತೀಕರಣಗೊಳ್ಳಬೇಕು ಎಂದರು.

ಅಪಘಾತ ಪ್ರಕರಣಗಳಲ್ಲಿ ನ್ಯಾಯ ಸಿಗಲು ಪೊಲೀಸ್ ಮತ್ತು ನ್ಯಾಯಾಂಗದ ಮೇಲೆ ಅವಲಂಬಿತವಾಗಿದೆ ಎಂಬ ಭಾವನೆ ಇದೆ. ಆದರೆ ಇದರಲ್ಲಿ ನ್ಯಾಯ ವೈದ್ಯಶಾಸ್ತ್ರದ ಪಾತ್ರವೂ ಇದೆ ಎಂಬುದನ್ನು ಮರೆತಿದ್ದೇವೆ. ಮರಣೋತ್ತರ ಪರೀಕ್ಷೆ ನಡೆಸಿ ಸಾವಿಗೆ ನಿಖರ ಕಾರಣ ಪತ್ತೆಹಚ್ಚುವಲ್ಲಿ ನ್ಯಾಯವೈದ್ಯಶಾಸ್ತ್ರದ ಕೆಲ ವಿಭಾಗಗಳಲ್ಲಿ ಇನ್ನಷ್ಟು ಸಂಶೋಧನೆ ಆಗಬೇಕು. ರೇಡಿಯೋ ಆಕ್ಟಿವಿಟಿ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಕೋಲಾರದ ಶ್ರೀ ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮೆಡಿಕೋ ಲೀಗಲ್ ಸೊಸೈಟಿ ನ್ಯಾಯ ವೈದ್ಯಶಾಸ್ತ್ರ ವಿಭಾಗದಿಂದ ಆಯೋಜಿಸಿದ್ದ 24ನೇ ರಾಜ್ಯ ಸಮ್ಮೇಳನವನ್ನು ಹೈಕೋರ್ಟ್ ನ್ಯಾಯಮೂರ್ತಿ ಜಿ.ನರೇಂದರ್ ಉದ್ಘಾಟಿಸಿದರು. ಎಡಿಜಿಪಿ ಡಾ.ರಾಜ್‌ವೀರ್ ಪಿ.ಶರ್ಮಾ, ಉಪ ಕುಲಪತಿ ಡಾ. ಸಿ.ವಿ. ರಘುವೀರ್ ಇತರರು ಇದ್ದರು.

ಉಪಕುಲಪತಿ ಸಿ.ವಿ. ರಘುವೀರ್ ಮಾತನಾಡಿ, ವೈದ್ಯಕೀಯ ಕಾಲೇಜುಗಳಲ್ಲಿನ ನ್ಯಾಯ ವೈದ್ಯಶಾಸ್ತ್ರ ವಿಭಾಗದಲ್ಲಿ ನಡೆಯುವ ಕಲಿಕೆ, ಸಂಶೋಧನೆ ತರಗತಿಗಷ್ಟೇ ಸೀಮಿತವಾಗುತ್ತಿದೆ. ಅಪರಾಧಿಗಳನ್ನು ಹಿಡಿಯಲು ಪೊಲೀಸರಿಗೆ ನೆರವಾಗುತ್ತಿಲ್ಲ. ದೇವರಾಜ ಅರಸು ಮೆಡಿಕಲ್ ಕಾಲೇಜು ಇದಕ್ಕಾಗಿಯೇ ಪ್ರತ್ಯೇಕ ವಿಭಾಗ ತೆರೆದು ನ್ಯಾಯವೈದ್ಯ ಶಾಸ್ತ್ರಕ್ಕೆ ಒತ್ತು ನೀಡುವ ಕೆಲಸ ಮಾಡುತ್ತಿದೆ ಎಂದರು.

ಕೋಲಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ದಿವ್ಯಾ ಗೋಪಿನಾಥ್, ದೇವರಾಜ ಅರಸು ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಆ್ಯಂಡ್ ರಿಸರ್ಚ್ ರಿಜಿಸ್ಟ್ರಾರ್ ಡಾ.ಎ.ವಿ.ಎಂ. ಕುಟ್ಟಿ, ಮೆಡಿಕಲ್ ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಎಲ್. ಹರೀಂದ್ರ ಕುಮಾರ್, ನ್ಯಾಯ ವೈದ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಜೆ.ಕಿರಣ್, ಸಮ್ಮೇಳನದ ಸಂಘಟನಾ ಸಮಿತಿಯ ಕಾರ್ಯದರ್ಶಿ ಡಾ.ಶ್ರೀನಿವಾಸರೆಡ್ಡಿ ಉಪಸ್ಥಿತರಿದ್ದರು.

ಕನ್ನಡಪ್ರಭ



# ಕಾನೂನು ಪ್ರಕರಣಗಳ ಇತ್ಯರ್ಥಕ್ಕೆ ಫೋರೆನ್ಸಿಕ್ ವಿಜ್ಞಾನ ಪ್ರಯೋಜನಕಾರಿ

## ಕಮ್ಲಾಸ್ಕಾನ್-2016 ಉದ್ಘಾಟಿಸಿ ಹೈಕೋರ್ಟ್ ನ್ಯಾ. ನರೇಂದರ್ ಅಭಿಪ್ರಾಯ

• **ಕನ್ನಡಪ್ರಭ ವಾರ್ತೆ** ಕೋಲಾರ

ಫೋರೆನ್ಸಿಕ್ ವಿಜ್ಞಾನವು ಕಾನೂನು ಪ್ರಕರಣಗಳ ನ್ಯಾಯಯುತ ಇತ್ಯರ್ಥಕ್ಕೆ ಹೆಚ್ಚು ಪ್ರಯೋಜನಕಾರಿಯಾಗಿದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಜಿ. ನರೇಂದರ್ ಅಭಿಪ್ರಾಯಪಟ್ಟರು.

ನಗರದ ದೇವರಾಜ ಅರಸು ವೈದ್ಯಕೀಯ ಕಾಲೇಜಿನ ಫೋರೆನ್ಸಿಕ್ ವೈದ್ಯಶಾಸ್ತ್ರ ವಿಭಾಗ ಕರ್ನಾಟಕ ಮೆಡಿಕೋ ಲೀಗಲ್ ಸೊಸೈಟಿ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ 24ನೇ ವಾರ್ಷಿಕ ಸಮಾವೇಶ ಕಮ್ಲಾಸ್ಕಾನ್-2016 ಉದ್ಘಾಟಿಸಿ ಅವರು ಮಾತನಾಡಿ, ಸಾಮಾನ್ಯವಾಗಿ ಫೋರೆನ್ಸಿಕ್ ಸೈನ್ಸ್ ಅಪರಾಧ ಪ್ರಕರಣಗಳಿಗೆ ಮಾತ್ರವೇ ಉಪಯೋಗವಾಗುತ್ತದೆ ಎನ್ನುವ ಭಾವನೆ ಇದೆ. ಆದರೆ ಅನೇಕ ಸಿವಿಲ್ ಪ್ರಕರಣಗಳಲ್ಲಿಯೂ ದಾಖಲೆಗಳ ರುಜುವಾತು ಪಡೆಸಲು ಫೋರೆನ್ಸಿಕ್ ವಿಜ್ಞಾನ ಬಳಸಿಕೊಳ್ಳಲಾಗುತ್ತಿದೆ ಎಂದು ವಿವರಿಸಿದರು.

**ಕಾಲಕಾಲಕ್ಕೆ ಬದಲಾಗಲಿ:** ಎಡಿಜಿಪಿ ರಜವೀರ್ ಪಿ. ಶರ್ಮ ಮಾತನಾಡಿ, ತಾವು 35 ವರ್ಷಗಳಿಂದಲೂ ಫೋರೆನ್ಸಿಕ್ ವಿಜ್ಞಾನ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದು, ಈ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಯ ಜ್ಞಾನವನ್ನು ಕಾಲಕಾಲಕ್ಕೆ ಅರಿತುಕೊಂಡು ಕಾನೂನು ವ್ಯಾಜ್ಯಗಳ ವಿಲೇವಾರಿಯ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಿದೆ ಎಂದರು.

ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಪ್ರತಿಯೊಂದು ವಿಚಾರವೂ ಗೂಗಲ್ ಸರ್ಚ್ ಮೂಲಕ ಲಭ್ಯವಾಗುತ್ತಿರುವ ದಿನಗಳಲ್ಲಿ ವೈದ್ಯರು ಹಳೆಯ ವಿಧಾನಗಳನ್ನೇ ಬಳಸಿ ಫೋರೆನ್ಸಿಕ್ ವರದಿಗಳನ್ನು ನೀಡಿದರೆ ಅವುಗಳಲ್ಲಿರುವ ತಪ್ಪುಗಳು ಜನಸಾಮಾನ್ಯರಿಗೂ ಅರ್ಥವಾಗುತ್ತದೆಯೆಂಬ ಎಚ್ಚರಿಕೆ ಇರಬೇಕೆಂದರು.

**ನಂಬಿಕೆ, ವಿಶ್ವಾಸ ಮುಖ್ಯ:** ಕಾಲೇಜಿನ ಉಪ ಕುಲಪತಿ ಡಾ. ಸಿ.ವಿ. ರಘುವೀರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಫೋರೆನ್ಸಿಕ್ ವಿಜ್ಞಾನವನ್ನು ಯಾವುದೇ ಕಾರಣಕ್ಕೂ ಕಡೆಗಣಿಸುವುದು ಬೇಡ. ವೈದ್ಯರು ಮತ್ತು ಪೊಲೀಸರು ಪರಸ್ಪರ ನಂಬಿಕೆ, ವಿಶ್ವಾಸಗಳ ಹೊಂದಾಣಿಕೆಯ ಮೂಲಕ ಎಂತಹದ್ದೇ ಅಪರಾಧ ಪ್ರಕರಣಗಳನ್ನು ಇತ್ಯರ್ಥಪಡಿಸಲು ಸಾಧ್ಯವಿದೆ. ಆದರೆ ಪ್ರಸ್ತುತ ಅಂಥ ವಾತಾವರಣ ಕಾಣಿಸುತ್ತಿಲ್ಲ ಎಂದು ವಿಷಾದಿಸಿದರು.

ಪೊಲೀಸ್ ಮತ್ತು ವೈದ್ಯಕೀಯ ರಂಗದ ಹೊಂದಾಣಿಕೆಯಿಂದ ಪ್ರಸ್ತುತ ಅಪರಾಧ ಪತ್ತೆಯಲ್ಲಿ ಆಗುತ್ತಿರುವ ತಪ್ಪುಗಳನ್ನು ಕಡಿಮೆ ಮಾಡಬಹುದು ಎಂದು ವಿಶ್ವಾಸ ವ್ಯಕ್ತಪಡಿಸಿದ ಅವರು, ತಮ್ಮ ಕಾಲೇಜಿನ ಸಂಸ್ಥಾಪಕ ಆರ್. ಎಲ್. ಜಾಲಪ್ಪ ಅವರ ಪ್ರೋತ್ಸಾಹದಿಂದ ಫೋರೆನ್ಸಿಕ್ ವಿಭಾಗವನ್ನು ಅತ್ಯುತ್ತಮವಾಗಿ ಅಭಿವೃದ್ಧಿಪಡಿಸಲಾಗಿದೆ ಎಂದರು.

ಪೊಲೀಸ್ ವರಿಷ್ಠಾಧಿಕಾರಿ ಡಾ. ದಿವ್ಯಾ ವಿ. ಗೋಪಿನಾಥ್, ಕಾಲೇಜಿನ ರಿಜಿಸ್ಟ್ರಾರ್ ಡಾ. ಎ.ವಿ.ಎಂ. ಕುಟ್ಟಿ, ಪ್ರಾಂಶುಪಾಲ ಡಾ. ಹರೇಂದ್ರಕುಮಾರ್ ಇದ್ದರು. ಡಾ. ಗೀತಾ ನಿರೂಪಿಸಿದರು. ಅಮೃತವರ್ಷಿಣಿ, ಹಿಮವರ್ಷಿಣಿ ಪ್ರಾರ್ಥಿಸಿದರು. ಡಾ. ಜೆ. ಕಿರಣ್ ಸ್ವಾಗತಿಸಿದರು. ಶ್ರೀದೇವಿ ಮತ್ತು ಶಶಿಧರ್ ಗ್ಯಾರ ಪರಿಚಯಿಸಿದರು. ಡಾ. ಶ್ರೀನಿವಾಸರೆಡ್ಡಿ ವಂದಿಸಿದರು.



ಕರ್ನಾಟಕ ಮೆಡಿಕೋ ಲೀಗಲ್ ಸೊಸೈಟಿ ಆಯೋಜಿಸಿದ್ದ 24ನೇ ವಾರ್ಷಿಕ ಸಮಾವೇಶ ಕಮ್ಲಾಸ್ಕಾನ್ 2016 ಅನ್ನು ಹೈಕೋರ್ಟ್ ನ್ಯಾಯಮೂರ್ತಿ ಜಿ. ನರೇಂದರ್ ಉದ್ಘಾಟಿಸಿದರು.

ಕೋಲಾರ ಪತ್ರಿಕೆ



**ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಡಾ|| ರಾಜವೀರ್ ಪಿ. ಶರ್ಮ ಅಭಿಮತ:**

# ವಿಧಿವಿಜ್ಞಾನ ಶಾಸ್ತ್ರ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳಲಿ





ಕೋಲಾರ ಡಿ ೨೧

ದೇಶದಲ್ಲಿನ ವಿಧಿವಿಜ್ಞಾನ ವೈದ್ಯಕೀಯ ಶಾಸ್ತ್ರವು ಆಧುನಿಕ ನ್ಯಾಯಾಂಗ ಸವಾಲುಗಳನ್ನು ಎದುರಿಸಲು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಹೆಚ್ಚು ಬೆಳೆಯ ಬೇಕಾಗಿದೆಯೆಂದು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಡಾ|| ರಾಜವೀರ್ ಪಿ. ಶರ್ಮಾ ಅವರು ಪ್ರತಿಪಾದಿಸಿದರು.

ಟಮಕದ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ವಿಧಿ ವಿಜ್ಞಾನ ಹಾಗೂ ವಿಷಶಾಸ್ತ್ರ ವಿಭಾಗದವರು ರಾಜ್ಯದ ವೈದ್ಯ ಕಾನೂನು ಸಂಸ್ಥೆಯ ಸಹಯೋಗದೊಂದಿಗೆ ಏರ್ಪಡಿಸಿರುವ ೨೦ನೇ ರಾಜ್ಯಮಟ್ಟದ ವಾರ್ಷಿಕ ಸಮ್ಮೇಳನ-ಕಮಲ್ಕಾನ್-ದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಫೋರೆನ್ಸಿಕ್ ವಿಭಾಗದಲ್ಲಿ ತಜ್ಞರಾಗಿರುವ ರಾಜವೀರ್ ಅವರು, ಇತ್ತೀಚೆಗೆ ಡಿಎನ್‌ಎ ತಂತ್ರಜ್ಞಾನ ಮೊದಲಾದ ಮಾನವಹಕ್ಕುಗಳ ಸವಾಲುಗಳು ವಿಧಿ ವಿಜ್ಞಾನ ಶಾಸ್ತ್ರದ ಮುಂದೆ ಬರುತ್ತಿವೆ. ಆದರೆ ಈ ವಿಭಾಗದ ಸಾಂಪ್ರದಾಯಿಕ ಪ್ರದೇಶಗಳನ್ನು ಪದ್ಧತಿಗಳನ್ನು ಬಿಟ್ಟು ಮುಂದುವರೆಯುತ್ತಿಲ್ಲ. ಅಪರಾಧ ಪ್ರಕರಣದಲ್ಲಿ ಜಾಗ್ರತೆ ವರದಿ ಸಿಕ್ಕಿದರೆ, ಆರೋಪಿ ತಪ್ಪಿಸಿಕೊಳ್ಳದಂತೆ ಕ್ರಮ ಕೈಗೊಳ್ಳಬಹುದು. ಅದು ನ್ಯಾಯಾಂಗಕ್ಕೂ ಅನುಕೂಲವಾಗುತ್ತೆ. ಈಗ ಕೆಲ ಪ್ರಕರಣಗಳಲ್ಲಿ ವಿಸ್ತ್ರ ವರದಿಗಾಗಿ ಲಂಡನ್‌ಗೆ ಕಳುಹಿಸಲಾಗುತ್ತಿದೆ. ಅದು ಬಹಳ ಪ್ರಾಮುಖ್ಯವಾಗಿದ್ದು, ವಿಳಂಬವಾದರೆ ಸಾಕ್ಷ್ಯ ನಾಶವಾಗುತ್ತೆ, ಆದ್ದರಿಂದ ದೇಶದಲ್ಲಿಂತೇ ಈ ಬಗ್ಗೆ ಸಂಶೋಧನೆಗಳು ನಡೆದು, ಮೆಡಿಕೋ ಲೀಗಲ್ ಜಗತ್ತಿಗೆ ಕೊಡುಗೆ ನೀಡಬೇಕೆಂದರು.

ಮುಂದುವರೆದ ಹೆಚ್ಚುವರಿ ಪೊಲೀಸ್ ನಿರ್ದೇಶಕರು ವೈದ್ಯರು, ಸಮಾಜಕ್ಕೆ ಬೇಕಾದುದನ್ನು ನೀಡಬೇಕೆ ಹೊರತು, ಅವರಿಗೆ ಬೇಕಾದ್ದನ್ನಲ್ಲ ಎಂದು ಹೇಳಿ, ಈಗ ಪ್ರಯೋಗಾಲಯಗಳ ವರದಿಯಿಂದ ಶೇಕಡ ೩೦ರಷ್ಟು ಮೊಕದ್ದಮೆಗಳಿಗೆ ಮಾತ್ರ ನೆರವಾಗುತ್ತಿವೆ. ವಿಳಂಬದಿಂದ ಆರೋಪಿಗೆ ಸ್ವಾತಂತ್ರ್ಯ ದೊರೆತು ಸಾಕ್ಷ್ಯಗಳ ನಾಶವಾಗುತ್ತದೆ. ಆದ್ದರಿಂದ ತ್ವರಿತ ಗತಿಯಲ್ಲಿ ವರದಿ ನೀಡುವಂತೆ ವಿಧಿವಿಜ್ಞಾನ ಶಾಸ್ತ್ರ ಪ್ರಗತಿ ಸಾಧಿಸಿ, ವೈದ್ಯಕೀಯ ಪ್ರಪಂಚದಲ್ಲಿ ಹೊಸ ಬೆಳಕು ಮೂಡಿಸಬೇಕೆಂದರು.

ಸಮ್ಮೇಳನವನ್ನು ಉದ್ಘಾಟಿಸಿದ ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಜಿ. ನರೇಂದರ್ ಅವರು ಈಗ ವಿಧಿ ವಿಜ್ಞಾನಶಾಸ್ತ್ರವು ನ್ಯಾಯಾಂಗದ ಒಂದು ಅಂಗವಾಗಿದೆ. ಅದು ಕೇವಲ ಶರೀರದ ಸ್ಥಿತಿಯ ಬಗ್ಗೆ ಮಾತ್ರ ಸಂಬಂಧಿಸಿಲ್ಲ. ಸುಳ್ಳು ಸಹಿ, ನಕಲಿ ದಾಖಲೆ ಸೃಷ್ಟಿ ಮೊದಲಾದ ಅಪರಾಧ ಪ್ರಕರಣಗಳನ್ನು ಪರಿಶೀಲಿಸಿ, ವರದಿ ನೀಡಬೇಕಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಅರಸು ವಿ.ವಿ. ಉಪಕುಲಪತಿ ಡಾ|| ಸಿ. ಆರ್. ರಘುವೀರ್ ಅವರು ವೈದ್ಯಕೀಯ ಶಾಸ್ತ್ರದಲ್ಲಿ ಈಗ ವಿಧಿವಿಜ್ಞಾನವು ಮಹತ್ವವಾಗಿದ್ದು, ಕೇವಲ ತರಗತಿಗೆ ಸೀಮಿತವಾಗಿಲ್ಲ. ಪೊಲೀಸರು, ನ್ಯಾಯಾಂಗದೊಡನೆ ಸಹಕರಿಸಬೇಕು ಎಂದರು.

ಡಾ|| ಶ್ರೀದೇವಿ ನಿರೂಪಿಸಿದ ಕಾರ್ಯಕ್ರಮದಲ್ಲಿ ಅಮೃತವರ್ಷಿಣಿ, ಹಿಮವರ್ಷಿಣಿಯವರಿಂದ ಪ್ರಾರ್ಥನೆ, ಸಮ್ಮೇಳನದ ಸಮಿತಿ ಅಧ್ಯಕ್ಷ ಡಾ|| ಕಿರಣ್‌ರಿಂದ ಸ್ವಾಗತ, ಕಾರ್ಯದರ್ಶಿ ಡಾ|| ಶ್ರೀನಿವಾಸರೆಡ್ಡಿ ಅವರಿಂದ ವಂದನೆ ನಡೆದವು.

ದೇವರಾಜ ಅರಸು ವಿವಿ ರಿಜಿಸ್ಟ್ರಾರ್ ವಿ.ಎಂ. ಕುಟ್ಟಿ, ಜಿಲ್ಲಾ ರಕ್ಷಣಾಧಿಕಾರಿ ಡಾ|| ದಿವ್ಯ ವಿ. ಗೋಪಿನಾಥ್, ಪಾಂಡುಪಾಲ ಹಿರೇಂದ್ರಕುಮಾರ್ ವೇದಿಕೆಯಲ್ಲಿದ್ದರು.

ಅತಿಥಿಗಳು ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು.